## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 235 /2023

**ಸಾಕ್ಷಿಯನ್ನು ದಿಃ 15.09.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಫಿಲಿಪ್ ಎಂ | ಸಿಡಬ್ಲ್ಯೂಃ 4 | ಪಿಡಬ್ಲ್ಯೂಃ 3 |
| ತಂದೆಯ ಹೆಸರು | ಮರಿಯಪ್ಪ | | |
| ವಯಸ್ಸು | 52 ವರ್ಷ | | |
| ಕೆಲಸ | ಪೈಂಟಿಂಗ್ | | |
| ವಾಸಸ್ಥಳ | ಉದಯನಗರ | | |

### ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ಚಾಸಾ–1 ನನ್ನ ಅತ್ತೆ. ಚಾಸಾ–2 ನನ್ನ ಪತ್ನಿ. ಚಾಸಾ–3 ನನ್ನ ಮಗ. ಚಾಸಾ–5 ರಿಂದ 8 ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತು. ಈ ಕೇಸಿಗೆ ಸಂಬಂಧಿಸಿದಂತೆ ನಾನು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ. ದಿಃ 31.01.2023 ರಂದು ರಾತ್ರಿ 10–00 ಗಂಟೆಗೆ ನಾನು, ಚಾಸಾ–1 ರಿಂದ 3 ರವರು ಊಟ ಮಾಡಿ ಕುಳಿತಿದ್ದೆವು. ಆಗ ಚಾಸಾ–3 ರವರು ಮನೆಯ ಮುಂದೆ ರಸ್ತೆಯಲ್ಲಿ ವಾಕ್ ಮಾಡುತ್ತೇನೆ ಎಂದು ಹೊರಗೆ ಹೋದ. 5 ನಿಮಿಷದಲ್ಲಿ ಚಾಸಾ–3ರವರು ಕಿರುಚುವ ಶಬ್ದ ಕೇಳಿತು. ಆಗ ಚಾಸಾ–1 ಮತ್ತು 2 ರವರು ಹೊರಗೆ ಓಡಿದರು. ನಾನು ಕೂಡ ಮನೆಯಿಂದ ಹೊರಗೆ ಹೋದೆ. ನಾನು ಹೋಗಿ ನೋಡಿದಾಗ ಆರೋಪಿ ಬೈಕಿನಲ್ಲಿ ನಿಂತಿದ್ದ. ಚಾಸಾ–2 ರವರು ಆರೋಪಿಯ ಬಳಿ ಹೋಗಿ ಏನಾಯಿತು ಎಂದು ಕೇಳಿದರು. ಆಗ ಆರೋಪಿಯು ಚಾಸಾ–2 ರವರಿಗೆ ಸೂಳೆ ಮುಂಡೆ ಎಂದು ಅವಾಚ್ಯವಾಗಿ ಬೈದ. ನಾನು ಹೋಗಿ ಬೆಳಿಗ್ಗೆ ಮಾತನಾಡೋಣ ಎಂದು ಆರೋಪಿಯ ಬಳಿ ಹೇಳಿದೆ. ಆಗ ಆರೋಪಿಯು ಏಕಾ ಏಕಿ ತನ್ನ ಕೈಯಿಂದ ಚಾಸಾ–2 ರವರ ಮುಖಕ್ಕೆ ಮತ್ತು ಕೈಗೆ, ಬೆನ್ನಿಗೆ ಹೊಡೆದ. ಚಾಸಾ–2 ರವರ ನೈಟಿಯನ್ನು ಹರಿದು ಸಾರ್ವಜನಿಕವಾಗಿ ಕಿತ್ತು ಹಾಕಿದ. ಆಗ ಚಾಸಾ–1 ರವರು ಬಂದು ಚಾಸಾ–2 ರವರನ್ನು ಬಟ್ಟೆಯಿಂದ ಮೈಯನ್ನು ಮುಚ್ಚಲು ಬಂದಾಗ, ಆರೋಪಿಯ ಬಳಿ ಚಾಕುವಿನಂತೆ ಇದ್ದ ಪೆನ್ನಿನಿಂದ ಚಾಸಾ–1ರವರ ಬಲಗೈಗೆ ಚುಚ್ಚಿದ. ಆಗ ಅಲ್ಲಿಗೆ ಚಾಸಾ–5

ಮತ್ತು 6 ರವರು ಬಂದು ಸಮಾಧಾನಪಡಿಸಿ ಆರೋಪಿಯನ್ನು ಕರೆದುಕೊಂಡು ಹೋದರು.ಆಗ ಆರೋಪಿಯು ಇನ್ನೊಂದು ಬಾರಿ ಇದೇ ರೀತಿ ಮಾಡಿದರೆ ನಿಮ್ಮನ್ನು ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿದ. ನಾನು ಚಾಸಾ–1 ಮತ್ತು 2 ರವರನ್ನು ಕರೆದಕೊಂಡು ಹುಣಸೂರು ಸರ್ಕಾರಿ ಆಸ್ಪತ್ರೆಗೆ ಹೋದೆ. ಅಲ್ಲಿ ಚಿಕಿತ್ಸೆ ಕೊಟ್ಟು ಕಳುಹಿಸಿದರು. ಚಾಸಾ–1 ರವರಿಗೆ ಮರುದಿನ ಹೆಚ್ಚು ನೋವಾಗಿದ್ದರಿಂದ ಹುಣಸೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದೆವು. ಚಾಸಾ–1 ರವರು ಈ ಬಗ್ಗೆ ಆರೋಪಿಯ ವಿರುದ್ಧ ದೂರು ಕೊಟ್ಟಿದ್ದಾರೆ. ಈ ಬಗ್ಗೆ ನಾನು ದಿಃ 02.02.2023 ರಂದು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ. ಆ ದಿನ ಆರೋಪಿ ಚಾಸಾ–1 ರವರಿಗೆ ಚುಚ್ಚಲು ಉಪಯೋಗಿಸಿದ ಪೆನ್ನನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಮು.ಮಾ.3ನ್ನು ನೋಡಿ ಗುರುತಿಸುತ್ತಾರೆ. ಆ ದಿನ ನಮ್ಮ ಮೇಲೆ ಹಲ್ಲೆ ಮಾಡಿದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ VSD ವಕೀಲರಿಂದಃ**

ನಾನು ಪೈಂಟಿಂಗ್ ಕೆಲಸ ಮಾಡುತ್ತೇನೆ. ದಿಃ 31.01.2023 ರಂದು ಘಟನೆ ನಡೆದಿದೆ. ಸಮಯ 10 ಗಂಟೆಯಾಗಿತ್ತು. ಆಗ ನಾನು ಮನೆಯಲ್ಲಿ ಊಟ ಮಾಡುತ್ತಿದ್ದೆ. ನನ್ನ ಮಗ ಕಿರುಚಿಕೊಂಡಾಗ ನನ್ನ ಹೆಂಡತಿ ಮತ್ತು ಅತ್ತೆ ಓಡಿ ಹೋದರು. ಆಗ ಗಲಾಟೆಯಾಗುತ್ತಿದೆ ಎಂದು ಗೊತ್ತಾಯಿತು. ನಿಮ್ಮ ಮಗ ಯಾವ ಕಾರಣಕ್ಕಾಗಿ ಕಿರುಚಿಕೊಂಡ ಎಂದು ನಿಮಗೆ ಗೊತ್ತೇ ಎಂದರೆ ಆರೋಪಿ ಗಾಡಿ ಗುದ್ದಲು ಬಂದ ಕಾರಣ ಕಿರುಚಿಕೊಂಡ. ಆ ಸ್ಥಳ ನಮ್ಮ ಮನೆಯ ಮುಂದೆ. ರಸ್ತೆಯಿಂದ ನಮ್ಮ ಮನೆ 2 ಅಡಿ ಅಂತರದಲ್ಲಿದೆ. ರಸ್ತೆಯ ಅಕ್ಕಪಕ್ಕ ಏನಾದರೂ ಇದೆಯೆ ಎಂದರೆ ಒಂದು ಹಳೆಯ ನೀರಿನ ಟ್ಯಾಂಕ್ ಇದೆ. ಮನೆಯಿಂದ ನೀರಿನ ಟ್ಯಾಂಕ್ ಮಧ್ಯೆ 15 ಅಡಿ ಅಂತರ ಇರಬಹುದು. ಚಾಸಾ–2ರವರಿಗೆ ಆರೋಪಿ ಕೈಯಿಂದ ಹೊಡೆದರು. ಆಗ ನೀವು ಅಲ್ಲಿ ಇದ್ದಿರಾ ಎಂದರೆ ಆಗ ನಾನು ಅಲ್ಲಿಗೆ ಹೋದೆ. ಆಗ ಆರೋಪಿ ಬಟ್ಟೆಯನ್ನು ಹರಿದು ಹಾಕಿದ್ದ. ಅದನ್ನು ನಾನು ಗುರುತಿಸುತ್ತೇನೆ. ಆರೋಪಿ ನನ್ನ ಅತ್ತೆಗೆ ಪೆನ್ನಿನಿಂದ ಹಿಡಿದು ಚುಚ್ಚಿದ. ಆ ಪೆನ್ನನ್ನು ಗುರುತಿಸುತ್ತೇನೆ. ಮು.ಮಾ–3 ರ

ಪೆನ್ನಿನಲ್ಲಿ ರಕ್ತದ ಕಲೆ ಇದೆಯೇ ಎಂದರೆ ನಾನು ನೋಡಿಲ್ಲ. ನನ್ನ ನ್ನು ಕೆಳಗೆ ಹಾಕಿ ತುಳಿಯುತ್ತಿದ್ದಾಗ ಚಾಸಾ-1 ಬಿಡಿಸಲು ಬಂದರು. ಆಗ ಆರೋಪಿ ಪೆನ್ನಿನಿಂದ ಚುಚ್ಚಿದ. ಆಗ ನಿಮಗೂ ಏಟಾಗಿತ್ತೇ ಎಂದರೆ ಏಟಾಗಿತ್ತು ನಾನು ಚಿಕಿತ್ಸೆ ಪಡೆಯಲು ಹೋಗಲಿಲ್ಲ. ಪ್ರಯತ್ನಿಸಿದ್ದಿರಾ ಎಂದರೆ ಇಲ್ಲ. ಚಾಸಾ-1 ಮತ್ತು 2 ರವರಿಗೆ ಚಿಕಿತ್ಸೆ ಕೊಡಿಸಿದ್ದೇನೆ. ನಮ್ಮ ಮನೆಯ ಮುಂದೆ ಇರುವ ರಸ್ತೆಯಲ್ಲಿಯೇ ಆರೋಪಿ ಪ್ರತೀದಿನ ಓಡಾಡುತ್ತಾರೆ ಎಂದರೆ ಸರಿ. ಅವರಿಗೆ ಓಡಾಡಲು ಅದೊಂದೇ ರಸ್ತೆ ಎಂದರೆ ಸರಿ . ಕೇವಲ 5 ಅಡಿಯ ರಸ್ತೆ ಇದೆ ಎಂದರೆ ಸರಿಯಲ್ಲ. ಆರೋಪಿ ಬರುತ್ತಿದ್ದಾಗ ನನ್ನ ಮಗ ರಸ್ತೆಗೆ ಅಡ್ಡ ನಿಂತಿದ್ದ ಕಾರಣ ಅರೋಪಿ ಅಡ್ಡ ಬರಬೇಡ ಎಂದು ಹೇಳಿದರು ಎಂದರೆ ಸರಿಯಲ್ಲ. ನಿಪಿ-2 ರ ಭಾವಚಿತ್ರದಲ್ಲಿ Transformer ಕಂಡು ಬರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಆ ರಸ್ತೆಯಲ್ಲಿ 8 ಗಂಟೆಗೆ ಜನ ಸಂಚಾರ ಕೊನೆಗೊಳ್ಳುತ್ತದೆ. ಗಲಾಟೆಯಾಗುವಾಗ ಚಾಸಾ-6, ಚಾಸಾ-5 ಬಂದು ಬಿಡಿಸಿದರು. ಯಾರು ಕೂಡ ಗಲಾಟೆ ಮಾಡಬೇಡಿ ಎಂದು ಸಮಾಧನಾ ಮಾಡಿಲ್ಲವೇ ಎಂದರೆ ಮಾಡಿದ್ದಾರೆ ಆದರೆ ಆರೋಪಿ ಸಮಾಧಾನಗೊಳ್ಳಲಿಲ್ಲ. ನಾನು ಹುಣಸೂರು ಸರ್ಕಾರಿ ಆಸ್ಪತ್ರೆಗೆ ಅದೇದಿನ ಚಾಸಾ-1 ಮತ್ತು 2 ರವರನ್ನು ಕರೆದುಕೊಂಡು ಹೋದೆ. ನಾನು ಹೇಳಿದಂತಹ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಮು.ಮಾ-3 ಘಟನೆಯ ಸಮಯದಲ್ಲಿ ಉಪಯೋಗಿಸಿದ ಪೆನ್ನು ಅಲ್ಲ ಎಂದರೆ ಸರಿಯಲ್ಲ. ಆರೋಪಿ ನಮಗೆ ಅವಾಚ್ಯ ಶಬ್ದಗಳಿಂದ ಬೈದರು, ನನಗೆ, ಚಾಸಾ-1 ಮತ್ತು 2 ರವರಿಗೆ ಹಲ್ಲೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಜಕೀಯವಾಗಿ ಆರೋಪಿಯನ್ನು ತುಳಿಯಬೇಕೆಂದು ರಾಜಕೀಯ ಪಿತೂರಿಯಿಂದ ಆರೋಪಿಯ ವಿರುದ್ಧ ಸುಳ್ಳು ದೂರನ್ನು ನೀಡಲಾಗಿದೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.